# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸ್ಪೆಷಲ್ ಸಿ. ಸಂಖ್ಯೆ: 36/2023

ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ .....ಫಿರ್ಯಾದುದಾರರು

-- ವಿರುದ್ಧ --

ಭಾಸ್ಕರ್ ....ಆರೋಪಿತ

1. ಆರೋಪಿಯ ಹೆಸರು ಭಾಸ್ಕರ್
2. ತಂದೆಯ ಹೆಸರು ವೆಂಕಟರವಣಪ್ಪ
3. ವಯಸ್ಸು 40 ವರ್ಷ
4. ಉದ್ಯೋಗ ಚಾಲಕ
5. ವಾಸಸ್ಥಳ ಪೆದ್ದೂರು ಗ್ರಾಮ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ.

## ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1. ಈ ಪ್ರಕರಣದಲ್ಲಿ ಅಭಿಯೋಜನೆಯ ಪರವಾಗಿ ಮಾಡಿರುವ ಸಾಕ್ಷ್ಯ ವಿಚಾರಣೆಯನ್ನು ನೀವು ಕೇಳಿಸಿಕೊಂಡಿರುವಿರಾ ?

ಉತ್ತರ: ಹೌದು

ಪ್ರಶ್ನೆ 2. ಪ್ರಾಸಾ 1 ಸುಧಾಕರ್ ರೆಡ್ಡಿ, ಪೊಲೀಸ್ ಇನ್ಸ್ಪೆಕ್ಟರ್, ಯಲಹಂಕ ನಿವ್ ಟೌನ್ ಪೊಲೀಸ್ ಠಾಣೆ, ಬೆಂಗಳೂರು ಮತ್ತು ಪ್ರಾಸಾ 3 ನರಸಿಂಹಮೂರ್ತಿ, ಗ್ರಾಮ ಆಡಳಿತಾಧಿಕಾರಿ, ರಾಮಾಪುರ

P.V.ಬಾಸ್ಕರ

ಪಂಚಾಯತಿ ಗ್ರಾಮ ಪಂಚಾಯತಿ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 22.02.2023 ರಂದು ಮಧ್ಯಾಹ್ನ ಸುಮಾರು 01-30 ಗಂಟೆ ಸಮಯದಲ್ಲಿ ಪ್ರಾಸಾ 1 ರವರು ಠಾಣಾ ಕರ್ತವ್ಯದಲ್ಲಿದ್ದಾಗ ಅವರಿಗೆ ಒಂದು ದೂರವಾಣಿ ಕರೆ ಬಂದಿದ್ದು, ಅದರಂತೆ ಅವರಿಗೆ ಒಬ್ಬ ವ್ಯಕ್ತಿ ಅಲಂಬಗಿರಿ ಬಸ್ ನಿಲ್ದಾಣದ ಹತ್ತಿರ ಅಕ್ರಮವಾಗಿ ಗಾಂಜಾ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ಪ್ರಾಸಾ1 ರವರು ಚಾಸಾ3 ಮತ್ತು 6 ರವರಿಗೆ ಸದರಿ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಲಿಖಿತ ನೋಟೀಸ್ ಕೊಟ್ಟು ಕೋರಿದ್ದು ಅದಕ್ಕೆ ಅವರು ಒಪ್ಪಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ [signature]

ಪ್ರಶ್ನೆ 3. ಪ್ರಾಸಾ 1 ಮತ್ತು ಪ್ರಾಸಾ 3 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ತಾವುಗಳು ಘಟನಾ ಸ್ಥಳಕ್ಕೆ ಸಿಬ್ಬಂದಿಗಳು, ಇಲಾಖಾ ವಾಹನದಲ್ಲಿ ಹೊರಟು ಹೋಗಿರುತ್ತಾರೆ, ನಂತರ ತಾವೆಲ್ಲರೂ ತಮ್ಮ ಅಂಗ ಶೋಧನೆಯನ್ನು ಮಾಡಿಕೊಂಡು ತಮ್ಮ ಬಳಿ ಯಾವುದೇ ಗಾಂಜಾ ಇಲ್ಲದ ಬಗ್ಗೆ ಖಚಿತ ಪಡಿಸಿಕೊಂಡಿರುತ್ತಾರೆ, ಪ್ರಾಸಾ 1 ರವರು ದೂರವಾಣಿ ಕರೆ ಮೂಲಕ ಪ್ರಾಸಾ 2 ಗೆಜೆಟೆಡ್ ಅಧಿಕಾರಿ ರವರಿಗೆ ಸದರಿ ಮಾಹಿತಿಯನ್ನು ತಿಳಿಸಿ ಪ್ರಾಸಾ 2 ರವರನ್ನು ಕರೆಯಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ [signature]

ಪ್ರಶ್ನೆ 4. ಪ್ರಾಸಾ 2 ಗಿರಿಜಮ್ಮ, ರಿಸೋರ್ಸ್ ಕೊ-ಆರ್ಡಿನೇಟರ್, ಬಿ.ಇ.ಓ ಕಛೇರಿ, ಚಿಂತಾಮಣಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹಾಗೂ ಪ್ರಾಸಾ 1 ಮತ್ತು ಪ್ರಾಸಾ 3 ರವರು ತಮ್ಮ ಸಾಕ್ಷ್ಯವನ್ನು

ಪಿ.ವಿ. ಬಾಸ್ಕರ್

ಮುಂದುವರಿಸುತ್ತಾ, ಸದರಿ ಸ್ಥಳದಲ್ಲಿ ಮರೆಯಲ್ಲಿದ್ದ ತಾವುಗಳು ಸದರಿ ಆಸಾಮಿಯನ್ನು ಸುತ್ತು ವರೆದು ಹಿಡಿದು, ಹೆಸರು ವಿಳಾಸ ಕೇಳಲಾಗಿ ಭಾಸ್ಕರ್ ಬಿನ್ ವೆಂಕಟರವಣಪ್ಪ, 40 ವರ್ಷ, ಪೆದ್ದೂರು ಗ್ರಾಮ, ಹಾಲಿ ವಾಸ ಲೆಗ್ಗೆರೆ , ಬೆಂಗಳೂರು ಎಂದು ತಿಳಿಸಿರುತ್ತಾರೆ, ಸದರಿ ಆಸಾಮಿಯನ್ನು ಬಿಳಿಯ ಹ್ಯಾಂಡ್ ಬ್ಯಾಗ್ ನಲ್ಲಿ ಇರುವ ವಸ್ತು ಏನು ಎಂದು ವಿಚಾರಿಸಲಾಗಿ ಆತ ತೊದಲುತ್ತಾ ಗಾಂಜಾ ಎಂದು ತಿಳಿಸಿದ್ದು, ಅದನ್ನು ಗಿರಾಕಿಗಳಿಗೆ ಮಾರಾಟ ಮಾಡಿ ಹಣ ಸಂಪಾದನೇ ಮಾಡುವ ಉದ್ದೇಶದಿಂದ ತಂದಿರುವುದಾಗಿ ಮತ್ತು ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 5. ಪ್ರಾಸಾ 1 ರಿಂದ ಪ್ರಾಸಾ 3 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಅಂಗ ಶೋಧನೆ ಮಾಡುವ ಉದ್ದೇಶದಿಂದ ನಿಮ್ಮನ್ನು ಕುರಿತು ನಿನ್ನ ಅಂಗ ಶೋಧನೆ ಮಾಡುವ ಸಲುವಾಗಿ ನ್ಯಾಯಾಧೀಶರ ಮುಂದೆ ಹಾಜರಪಡಿಸಬೇಕೆ, ಅಥವಾ ಗೆಜೆಟೆಡ್ ಅಧಿಕಾರಿಯಾದ ಮುಂದೆ ಹಾಜರಪಡಿಸಬೇಕೆ ? ಎಂದು ಕೇಳಲಾಗಿ ನೀವು ಗೆಜೆಟೆಡ್ ಅಧಿಕಾರಿಯವರು ಅಂಗ ಶೋಧನೆ ಮಾಡಬಹುದು ಎಂದು ತಿಳಿಸಿರುತ್ತೀರ, ಈ ಬಗ್ಗೆ ಲಿಖಿತ ಪ್ರಶ್ನಾವಳಿಗಳನ್ನು ತಯಾರಿಸಿ ಆರೋಪಿಯ ಒಪ್ಪಿಗೆಯನ್ನು ಪಡೆಯಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

ಪ್ರಶ್ನೆ 6. ಪ್ರಾಸಾ 1 ರಿಂದ ಪ್ರಾಸಾ 3 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಪ್ರಾಸಾ 2 ರವರು ಪ್ರಾಸಾ 1 ರವರ ಸಿಬ್ಬಂದಿ ಮೂಲಕ ಆರೋಪಿಯಾದ ನಿಮ್ಮ ಅಂಗ ಶೋಧನೆ ಮಾಡಲಾಗಿ ನಿಮ್ಮ ಬಳಿ ಒಂದು ಸಾಮ್ ಸ್ಯಾಂಗ್ ಕಂಪನಿಯ ಮೊಬೈಲ್ ಇದ್ದು ಅದನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು,

ನಿಮ್ಮ ಬಳಿ ಇದ್ದ ಬಿಳಿ ಬ್ಯಾಗ್ ಅನ್ನು ಪರಿಶೀಲಿಸಲಾಗಿ ಅದರಲ್ಲಿ ಅರ್ಧ ಒಣಗಿದ ಕಡ್ಡಿ, ಬೀಜ ಒಳಗೊಂಡ ಗಾಂಜಾ ಇತ್ತು ಅದನ್ನು ಬ್ಯಾಗ್ ಸಮೇತ ತೂಕ ಮಾಡಿ ನೋಡಲಾಗಿ 2 ಕೆಜಿ 15 ಗ್ರಾಂ ಇದ್ದು, ಬ್ಯಾಗ್ ತೂಕ ಮಾಡಲಾಗಿ ಸುಮಾರು 15 ಗ್ರಾಂ ಇತ್ತು, ಸದರಿ ಗಾಂಜಾದ ಒಟ್ಟು ಮೌಲ್ಯ ಸುಮಾರು 60 ಸಾವಿರ ರೂಗಳು ಇರಬಹುದು ಎಂದು ಅಂದಾಜಿಸಲಾಯಿತು, ನಂತರ ಗಾಂಜಾವನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಹೊಲೆದು, SR ಎಂಬ ಅಕ್ಷರದಿಂದ ಸೀಲ್ ಮಾಡಿ, FLMS ಎಂಬ ಬಾರ್ ಕೋಡ್ ಇರುವ ಚೀಟಿಯನ್ನು ಅಂಟಿಸಿ, ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು, ಮೊಬೈಲ್ ಅನ್ನು ಪರಿಶೀಲಿಸಲಾಗಿ ಕಡು ನೀಲಿ ಬಣ್ಣದ Galaxy A10 screen touch Samsung mobile ಆಗಿದ್ದು, ಅದನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಳ್ಳಲಾಯಿತು, ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಪ್ರಾಸಾ 1 ರವರು ತಯಾರು ಮಾಡಿದ್ದು, ಅದಕ್ಕೆ ಪ್ರಾಸಾ2 ಮತ್ತು 3 ರವರು ಸಹಿ ಮಾಡಿರುತ್ತಾರೆಂದು ಹಾಗೂ ಸದರಿ ಕಾಲಕ್ಕೆ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ ಗೊತ್ತಿಲ್ಲ.

ಪ್ರಶ್ನೆ 7. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದುರಿಗಿ ದೂರನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ-11 ರವರ ಮುಂದೆ ಹಾಜರು ಪಡಿಸಿದ್ದು, ಅವರು ಅದನ್ನು ಸ್ವೀಕರಿಸಿ ಠಾಣಾ ಮೊಕದ್ದಮ್ಮೆ ಸಂಖ್ಯೆ 71/2020 ರಲ್ಲಿ ಪ್ರಕರಣವನ್ನು ನೋಂದಾಯಿಸಿ ಪ್ರ.ವ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ರವಾನಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ ಗೊತ್ತಿಲ್ಲ

P.V. ಬಾಸ್ಕರ್

ಪ್ರಶ್ನೆ 8. ಪ್ರಾಸಾ 1 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿ: 22.02.2023 ರಂದು ದಾಳಿ ಪಂಚನಾಮೆ ಕಾಲದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಠಾಣೆಗೆ ನೀಡಿದ ಕ್ಯಾಮೆರಾದಲ್ಲಿ ಫೋಟೋಗಳನ್ನು ತಮ್ಮ ಸಿಬ್ಬಂದಿ ತೆಗೆದಿದ್ದು, ಈ ಬಗ್ಗೆ ತಾನು 65(ಬಿ)ರ ಪ್ರಮಾಣ ಪತ್ರವನ್ನು ನೀಡಿರುತ್ತಾರೆ, ಘಟನೆ ಸಂಬಂಧ ಪೊಲೀಸ್ ಅಧೀಕ್ಷಕರಿಗೆ ಕಳುಹಿಸಿದ ಇ-ಮೇಲ್ ಸಂದೇಶವನ್ನು ಕಳುಹಿಸಿದ್ದು, ಲಿಖಿತ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತಾರೆ ಹಾಗೂ ದಾಳಿ ಫಲಪ್ರದವಾದ ಸಂಬಂಧ ಎಸ್.ಪಿ ರವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 9. ಪ್ರಾಸಾ 4 ಸಿ.ನಾರಾಯಣಸ್ವಾಮಿ, ನಿವೃತ್ತ ಪಿ.ಎಸ್.ಐ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿಃ 22.02.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ತಾನು ಠಾಣಾ SHO ಕರ್ತವ್ಯದಲ್ಲಿದ್ದಾಗ ಪ್ರಾಸಾ-1 ಪಿ.ಐ ರವರು ಠಾಣೆಗೆ ಹಾಜರಾಗಿ ಒಂದು ವರದಿಯೊಂದಿಗೆ ಒಬ್ಬ ಆಸಾಮಿ ಮತ್ತು ಅಮಾನತ್ತು ಪಡಿಸಿಕೊಂಡ ಮಾಲಗಳನ್ನು ಹಾಜರುಪಡಿಸಿದ್ದು, ತಾನು ಅವುಗಳನ್ನು ಸ್ವೀಕರಿಸಿ ಠಾಣಾ ಮೊಕ್ಕದ್ದಮ್ಮೆ ಸಂಖ್ಯೆ 71/2023 ರಂತೆ ಕಲಂ 20(b) NDPS ಕಾಯಿದೆಯಡಿ ಪ್ರಕರಣವನ್ನು ದಾಖಲು ಮಾಡಿ, ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ತಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 10. ಪ್ರಾಸಾ 4 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಅಮಾನತ್ತು ಪಡಿಸಿದ್ದ ಮಾಲನ್ನು ಸ್ವೀಕರಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ 60/2023 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ, ನಂತರ ಸಂಜೆ 5.00

ಗಂಟೆ ಸಮಯದಲ್ಲಿ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ವಶಕ್ಕೆ ಪಡೆದು, ನಿಮ್ಮ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತಾರೆ, ಆನಂತರ ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ಅದೇ ದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ [signature]

ಪ್ರಶ್ನೆ 11. ಪ್ರಾಸಾ 4 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ದಿನ ತನ್ನ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಚಾಸಾ-3 ರಿಂದ ಚಾಸಾ-5, ಚಾಸಾ-7 ಮತ್ತು ಚಾಸಾ-8, ಪ್ರಾಸಾ-3 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತಾರೆ, ದಿನಾಂಕ 24.02.2023 ರಂದು ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ Correctness Certificate ಪಡೆದುಕೊಳ್ಳಲು, ಉಳಿದ ಗಾಂಜಾವನ್ನು ಚಿಕ್ಕಬಳ್ಳಾಪುರ DAR ರವರಿಗೆ ಹಸ್ತಾಂತರಿಸಲು ಮಾನ್ಯ ವಿಶೇಷ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿಕೊಂಡಿದ್ದು, ದಿನಾಂಕ 25.02.2023 ರಂದು ನ್ಯಾಯಾಲಯದ ಆದೇಶವನ್ನು ಪಡೆದುಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ [signature]

ಪ್ರಶ್ನೆ 12. ಪ್ರಾಸಾ 4 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಅದರಂತೆ ಚಿಂತಾಮಣಿ Prl CJ and JMFC ನ್ಯಾಯಾಧೀಶರ ಮುಂದೆ ದಿನಾಂಕ 03.03.2023 ರಂದು ಮಾಲನ್ನು ಹಾಜರುಪಡಿಸಿ Correctness Certificate ಅನ್ನು ಪಡೆದುಕೊಂಡಿರುತ್ತಾರೆ, ಆ ಕಾಲಕ್ಕೆ ಭಾವ ಚಿತ್ರಗಳನ್ನು ಸಹ ತೆಗೆಸಲಾಗಿರುತ್ತದೆ, ಸದರಿ ಸಮಯದಲ್ಲಿ ಮಾನ್ಯ ನ್ಯಾಯಾಧೀಶರು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ತಲಾ 30 ಗ್ರಾಂ ಗಾಂಜಾವನ್ನು ದ್ವಿಪ್ರತಿಯಲ್ಲಿ ಬೇರ್ಪಡಿಸಿರುತ್ತಾರೆ, ನಂತರ ಎರಡೂ ಬಗೆಯ ಗಾಂಜಾ ಪ್ಯಾಕೇಟ್‌ಗಳನ್ನು ಮುಂದಿನ ಕ್ರಮಕ್ಕಾಗಿ

P.V.ಬಾಸ್ಕರ

ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆಯಲಾಯಿತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 13. ಪ್ರಾಸಾ 4 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಮಾದರಿ ಗಾಂಜಾ ಪ್ಯಾಕೇಟ್ ಅನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 65/2023 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ, ನಂತರ ಸದರಿ ಮಾದರಿ ಗಾಂಜಾ ಪ್ಯಾಕೇಟ್ ಅನ್ನು ಎಫ್ ಎಸ್ ಎಲ್ ಪರೀಕ್ಷೆಗಾಗಿ ದಿ.06.03.2023 ರಂದು ತಮ್ಮ ಸಿಬ್ಬಂದಿ ಎ.ಎಸ್.ಐ ಚಾಸಾ-4 ರವರನ್ನು ಎಫ್ ಎಸ್ ಎಲ್ ಕಛೇರಿಗೆ ಕಳುಹಿಸಿಕೊಟ್ಟಿದ್ದು, ಸದರಿ ರವರು ಅದನ್ನು ಎಫ್ ಎಸ್ ಎಲ್ ಕಛೇರಿಯಲ್ಲಿ ತಲುಪಿಸಿ ಸ್ವೀಕೃತಿಯನ್ನು ಪಡೆದು ತಂದು ತನ್ನ ಸಮಕ್ಷಮದಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿರುತ್ತಾರೆ, ದಿ.03.03.2023 ರಂದು ಉಳಿದ ಗಾಂಜಾವನ್ನು ವಿಲೇವಾರಿ ಮಾಡುವ ಸಲುವಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ದಿ.04.03.2023 ರಂದು ಆದೇಶವನ್ನು ಪಡೆದುಕೊಂಡು, ದಿ.09.03.2023 ರಂದು ಜಿಲ್ಲಾ ಸಶಸ್ತ್ರ ಮೀಸಲು ಪಡೆ ರವರ ವಶಕ್ಕೆ ವಹಿಸಿಕೊಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ

ಪ್ರಶ್ನೆ 14. ಪ್ರಾಸಾ 4 ರವರು ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ದಿ.06.01.2024 ರಂದು ಮಾನ್ಯ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿ DDC ರವರಿಗೆ ಹಾಜರು ಪಡಿಸಿರುವ ಉಳಿದ ಗಾಂಜಾವನ್ನು ನಾಶಪಡಿಸುವಂತೆ ಅನುಮತಿ ಪಡೆದುಕೊಂಡಿರುತ್ತಾರೆ, ದಿ.16.01.2024 ರಂದು FSL ವರದಿಯನ್ನು ಸ್ವೀಕರಿಸಿ, ಆರೋಪಿ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಘನ ನ್ಯಾಯಾಲಯಕ್ಕೆ

ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರ:

ಪ್ರಶ್ನೆ 15. ಪ್ರಾಸಾ 5 ಡಾ. ಗೌತಮ್.ಎಂ.ಡಿ, ಉಪ ನಿರ್ದೇಶಕರು, ಫಾರೆನ್ಸಿಕ್ ಕೆಮಿಸ್ಟ್ರಿ, ಎಫ್.ಎಸ್.ಎಲ್, ಮಡಿವಾಳ, ಬೆಂಗಳೂರು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 06.03.2023 ರಂದು ಎ.ಎಸ್.ಐ- ನಂಜುಂಡಗೌಡ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಇವರ ಮುಖಾಂತರ ಮೊಕದ್ದಮೆ ಸಂಖ್ಯೆ 71/2023 ರಲ್ಲಿ ಮೊಹರು ಮಾಡಿರುವ ವಸ್ತುಗಳನ್ನು ಸ್ವೀಕರಿಸಿರುವುದಾಗಿ, ದಿನಾಂಕ: 17.03.2023 ರಂದು ಸದರಿ ವಸ್ತುವನ್ನು ಮಾದರಿ ಮುದ್ರೆಯೊಂದಿಗೆ ತಾಳೆ ಮಾಡಲಾಗಿ ಅದು ಯಥಾಸ್ಥಿತಿ ಯಲ್ಲಿ ಇತ್ತೆಂದು ಅಭಿಪ್ರಾಯ ಪಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರ:

ಪ್ರಶ್ನೆ 16. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, **ವಿಶ್ಲೇಷಣೆಯ ವಿಧಾನ:** "CJ (Jr.Dn) Chintamani" ಎಂಬ ಮುದ್ರೆಯೊಂದಿಗೆ ಮೊಹರು ಮಾಡಿದ ಬಟ್ಟೆ ಪ್ಯಾಕೆಟ್‌ಗಳು, ಮೊಹರುಗಳು ಹಾಗೆಯೇ ಇದ್ದು ಐ.ಓ. ಕಳುಹಿಸಿದ ಮಾದರಿಯ ಮುದ್ರೆಯೊಂದಿಗೆ ತಾಳೆ ಮಾಡಲಾಗಿದ್ದು, ಸದರಿ ವಸ್ತುಗಳ ವಿವರಣೆ ಹೊಂದಿರುವ ಬಟ್ಟೆ ಪ್ಯಾಕೆಟ್ ಅದಕ್ಕೆ ಎರಡು ಕಾಗದದ ಚೀಟಿಗಳೊಂದಿಗೆ ಅಂಟಿಸಲಾಗಿದ್ದು, PSI ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು Prl. Civil Judge & JMFC, Chintamani ರವರು ದೃಢೀಕರಿಸಿದ್ದು, ಸದರಿ ವಸ್ತುಗಳನ್ನು ತರೆದು ನೋಡಲಾಗಿ ಒಣಗಿದ ಹಸಿರು ಮಿಶ್ರಿತ ಕಂದು ಎಲೆಗಳು, ಹಣ್ಣು ಬಿಡುವ ಮುರಿದ ಕಾಂಡಗಳು ಮತ್ತು ಹೂಬಿಡುವ ಮೇಲ್ಭಾಗಗಳು ಮತ್ತು ವಿಶಿಷ್ಟ ವಾಸನೆಯ ಬೀಜಗಳನ್ನು ಒಳಗೊಂಡಿರುವ ಪ್ಲಾಸ್ಟಿಕ್ ಕವರ್

ಹೊಂದಿರುವ ಮುಚ್ಚಿದ ಬಟ್ಟೆಯ ಪ್ಯಾಕೆಟ್ ಕಂಡುಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ [illegible]

ಪ್ರಶ್ನೆ 17. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ವಸ್ತುವನ್ನು ತೆರೆಯುವ ಮೊದಲು ಪ್ಲಾಸ್ಟಿಕ್ ಕವರ್ ಸಮೇತ ತೂಕ ಮಾಡಲಾಗಿ ವಸ್ತು ಸಂಖ್ಯೆ 1 ರ ತೂಕವು 29.28 ಗ್ರಾಂ ಇತ್ತೆಂದು, ಹಾಗೂ ರಾಸಾಯನಿಕ ಪರೀಕ್ಷೆಗೆ ಒಳಪಡಿದ ನಂತರ ಸದರಿ ವಸ್ತುವಿನ ತೂಕವು 23.70 ಗ್ರಾಂ ಇತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

ಉತ್ತರಃ [illegible]

ಪ್ರಶ್ನೆ 18. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ತಾನು ಕೆಳಗಿನ ಐದು ವಿವಿಧ ರೀತಿಯ ಪರೀಕ್ಷೆಯನ್ನು ನಡೆಸಿರುವುದಾಗಿ ಹಾಗೂ ಅದನ್ನು ತನ್ನ ವರದಿಯಲ್ಲಿ ನಮೂದಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಛಿಸುವಿರಾ ?

| | |
|---|---|
| 1. Microscopic characteristics: | Non glandular hair (trichomes), numerous, unicellular, rigid, curved, with slender pointed apex and enlarged base containing cystolithic hairs are observed. These microscopic features found on the surface of the fruiting and flowering tops are the characteristic features of cannabis in article No.1. |
| 2. Duquenois-Levine test: | Appearance of purple colour in the chloroform layer<br>positive for cannabis in Article no.1 |

P.V. [illegible]

| | |
|---|---|
| 3. Para aminophenol test: | Formation of blue colour<br>Positive for cannabis in Article no.1 |
| 4. Thin Layer Chromatography: | Purple red colour spots at Rf 35(cannabidioal), 26(cannabinol) and 33(Tetrahydrocannabinol)<br>Positive for cannabinoids (constituent of ganja) in Article No. 1. |
| 5. UV Spectrophotometric analysis: | Sample is extracted with petroleum either and extract is filtered after removing the colouring matter and used for UV Spectrophotometric analysis.<br>Result: Spectrum, at λmax=277.86m, for Article No. 1.<br>Positive for tetrahydrocannabinol (major constituent of ganja) in Article No. 1. |

ಉತ್ತರಃ

ಪ್ರಶ್ನೆ 19. ಪ್ರಾಸಾ 5 ತಮ್ಮ ಸಾಕ್ಷ್ಯವನ್ನು ಮುಂದುವರಿಸುತ್ತಾ, ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಳಿಗೆ ಒಳಪಡಿಸಿ ತನ್ನ ವರದಿ ಸಂಖ್ಯೆ FSL/FLMS/NS/147/2023 ರಲ್ಲಿ ನಮೂದಿಸಿರುವುದಾಗಿ ಸದರಿ ವಸ್ತು ಗಾಂಜಾಗೆ ಧನಾತ್ಮಕವಾಗಿ ಪ್ರತಿಕ್ರಿಯಿಸಿರುವುದಾಗಿ ಮತ್ತು ಗಾಂಜಾವು Psychoactive ಅಂಶಗಳು ಕಂಡುಬಂದಿರುತ್ತದೆಂದು, ರಾಸಾಯನಿಕ ವಿಶ್ಲೇಷಣೆಯ ನಂತರ ತಾನು ಕಛೇರಿಯ ಮೊಹರಿನೊಂದಿಗೆ ಪುನಃ ಪ್ಯಾಕ್ ಮಾಡಿ ಹಾಗೂ ಉಳಿದ ಮಾದರಿಯನ್ನು ಮಾದರಿ ಮುದ್ರೆಯೊಂದಿಗೆ ತನಿಖಾಧಿಕಾರಿಗಳಿಗೆ ಹತ್ತಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನಾದರೂ ಹೇಳಲು ಇಚ್ಚಿಸುವಿರಾ ?

ಉತ್ತರಃ

P.V. ಬಾಸ್ಕರ್

ಪ್ರಶ್ನೆ 20. ಈ ಪ್ರಕರಣದಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ ?

ಉತ್ತರಃ

ಪ್ರಶ್ನೆ 21. ಈ ಪ್ರಕರಣದಲ್ಲಿ ನಿಮ್ಮ ಪರ ಯಾವುದಾದರೂ ಲಿಖಿತ ಹೇಳಿಕೆಗಳನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರಿಪಡಿಸುವಿರಾ ?

ಉತ್ತರಃ

ಪ್ರಶ್ನೆ 22. ಈ ಪ್ರಕರಣದಲ್ಲಿ ನೀವು ಮತ್ತೆ ಏನಾದರೂ ಹೇಳುವುದಿದೆಯಾ ?

ಉತ್ತರಃ

ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ 1 ರಿಂದ 22 ಪ್ರಶ್ನೆಗಳಿಗೆ ಆರೋಪಿತ ತನ್ನ ಸ್ವಇಚ್ಛೆಯಿಂದ ಕೊಟ್ಟ ಹೇಳಿಕೆಗಳನ್ನು ಸರಿಯಾಗಿ ದಾಖಲಿಸಿಕೊಂಡಿರುವೆ ಎಂದು ನಾನು ಈ ಮೂಲಕ ದೃಢಿಕರಿಸುತ್ತೇನೆ.

6/7/26

ದಿನಾಂಕಃ 06.07.2026
ಸ್ಥಳಃ ಚಿಕ್ಕಬಳ್ಳಾಪುರ

**(ಟಿ.ಪಿ. ರಾಮಲಿಂಗೇ ಗೌಡ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಬಳ್ಳಾಪುರ.